OS 42/2015 DW-1

**ದಿನಾಂಕಃ 04-02-2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ತಾವರೆಕೆರೆಯ ಆರ್.ಎಸ್ ಆಂಜನೇಯ ಶೆಟ್ಟಿ ಇವರು ನಮ್ಮ ಕುಲಸ್ಥರು. ಅವರ ಮಗ ಆರ್.ಎ. ರಾಮು ಇವರನ್ನು ನಾನು ನೋಡಿರುತ್ತೇನೆ. ಸದರಿ ಆರ್.ಎ. ರಾಮು ರವರು ಪ್ರಸನ್ನ ಶೆಟ್ಟಿಯವರು ವಾದಿ ಹನುಮಕ್ಕರವರನ್ನು ಮದುವೆಯಾಗಿ, ಆ ನಂತರ 2 ನೇ ಮದುವೆಯಾಗಿರುತ್ತಾರೆ ಎಂದು ಈ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತಾರೆ ಎಂದರೆ ಸಾಕ್ಷಿಯು 2 ನೇ ವಾದಿ ಹನುಮಂತಪ್ಪ ಸ್ನೇಹಿತರಾದ ಕಾರಣ ಆ ರೀತಿ ಸಾಕ್ಷಿ ನುಡಿದಿರುತ್ತಾರೆ ಎಂದು ನುಡಿಯುತ್ತಾರೆ. ಆರ್.ಎಸ್ ಆಂಜನೇಯ ಶೆಟ್ಟಿ ಇವರು ನಮ್ಮ ಸಂಬಂಧಿಕರಾಗಿದ್ದು , ಕುಲಸ್ಥರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ತಂದೆಯವರು ವಾದಿ ಹನುಮಕ್ಕಳನ್ನು ಮದುವೆಯಾದ ನಂತರ ತಾವರೆಕೆರೆಯಲ್ಲಿ ಎಷ್ಟು ವರ್ಷ ವಾಸವಾಗಿದ್ದರು ಎಂದರೆ ಸಾಕ್ಷಿಯು ನನ್ನ ತಂದೆ ವಾದಿ ಹನುಮಕ್ಕಳನ್ನು ಮದುವೆಯಾಗಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಅವರ ಸಹೋದರರಿಂದ ಒಟ್ಟು ಕುಟುಂಬದಲ್ಲಿದ್ದರೋ , ಬೇರೆಯಾಗಿದ್ದರೋ ಎಂದರೆ ಸಾಕ್ಷಿಯು ನನ್ನ ತಾಯಿ ಕೃಷ್ಣವೇಣಿಗೆ ಮದುವೆಯಾದ ಸ್ವಲ್ಪ ದಿನದ ನಂತರ ಶಿರಾಕ್ಕೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ.

3. ನನ್ನ ತಂದೆ ಕೃಷ್ಣವೇಣಿಯವರನ್ನು ಶಿರಾದಲ್ಲಿ ಮದುವೆಯಾಗಿರುತ್ತಾರೆ. ನನ್ನ ತಂದೆ ಕೃಷ್ಣವೇಣಿಯವರನ್ನು ಮದುವೆಯಾಗುವ ಮೊದಲು ಯಾರನ್ನು ಮದುವೆಯಾಗಿದ್ದರು ಎಂದು ಹಾಗೂ ಅವರ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಅವರ ಸಹೋದರರಿಂದ ಬೇರೆಯಾಗಿ ತಾವರೆಕೆರೆಯಲ್ಲಿ 15 ವರ್ಷ ವಾದಿ ಹನುಮಕ್ಕಳ ಜೊತೆ ಇದ್ದರು ಎಂದರೆ ಸುಳ್ಳು. ನನ್ನ ತಂದೆ ಅವರ ಸಹೋದರರಿಂದ ಬೇರೆಯಾಗಿ ವಾಸವಾಗಿದ್ದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಗೊತ್ತಿದೆ , ಈಗಾಗಲೇ ಸುಳ್ಳು ಎಂದು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಎಲ್ಲಾ ವಿಚಾರಗಳು ನಾನು ಹುಟ್ಟುವ ಮೊದಲೇ ಆಗಿರುವ ಕಾರಣ ಮಾಹಿತಿ ಎಲ್ಲಿಂದ ಪಡೆದಿದ್ದೀರಿ ಎಂದರೆ ಸಾಕ್ಷಿಯು ಮನೆಯಲ್ಲಿ

ಹಾಗೂ ಸಂಬಂಧಿಕರು ಮಾತನಾಡುವಾಗ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ ಮರಣಹೊಂದಿದಾಗ ವಾದಿ ಹನುಮಕ್ಕಳ ಮಾಂಗಲ್ಯವನ್ನು ಶಾಸ್ತ್ರೋಕ್ತವಾಗಿ ಅಲ್ಲಿಯೇ ತೆಗೆದಿರುತ್ತಾರೆ ಎಂದರೆ ಸುಳ್ಳು ಎಂದು ನುಡಿಯುತ್ತಾರೆ. ನನ್ನ ತಂದೆಯ ಶವಸಂಸ್ಕಾರಕ್ಕೆ ವಾದಿ ಹನುಮಕ್ಕ ಹಾಗೂ ಅವರ ಮಗ ಬಂದಿರಲಿಲ್ಲ.

4. ನನ್ನ ತಂದೆ ತಾವರೆಕೆಯಲ್ಲಿ ಹೈನುಗಾರಿಕೆ ಮಾಡುತ್ತಿದ್ದರು ಎಂದರೆ ಸುಳ್ಳು. ತಾವರೆಕರೆಯಲ್ಲಿ ನನ್ನ ತಂದೆಗೆ ಜಮೀನು ಇದೆ ಎಂದರೆ ಸರಿ. ಸದರಿ ಜಮೀನನ್ನು ಹನುಮಕ್ಕ ಮತ್ತು ನನ್ನ ತಂದೆ ಅಭಿವೃದ್ಧಿ ಪಡಿಸಿಕೊಂಡು ಅಲ್ಲಿಯೇ ವಾಸವಾಗಿದ್ದರು ಎಂದರೆ ಸುಳ್ಳು. 1994-95 ರಲ್ಲಿ ನನ್ನ ತಂದೆ ಹನುಮಕ್ಕಳನ್ನು ಸದರಿ ಹಾಲಿನ ಡೈರಿಯಲ್ಲಿ ಶೇರ್ ಹೋಲ್ಡರ್ ಮಾಡಿದ್ದರು ಎಂದರೆ ಸುಳ್ಳು. ನಿಪಿ-12 ರಲ್ಲಿ ಹಾಲಿನ ಡೈರಿಯ ಸಭೆ ಕರೆದಿದ್ದು , ಅದರಲ್ಲಿ ಹನುಮಕ್ಕ ಕೋಂ ಪ್ರಸನ್ನಕುಮಾರ್ ಎಂದು ಬರೆದಿದೆ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರು ಆರ್.ವಿ. ಪ್ರಸನ್ನ ಕುಮಾರ್ , ನಿಪಿ-12 ರಲ್ಲಿರುವ ಪ್ರಸನ್ನಕುಮಾರ್ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. 2 ನೇ ವಾದಿ ಬೆಂಗಳೂರಿನಲ್ಲಿ ದ್ವಿಚಕ್ರವಾಹನವನ್ನು ಖರೀದಿಸಿದ್ದು , ನಿಪಿ-23 ರಲ್ಲಿ ಹನುಮಂತಪ್ಪ ಬಿನ್ ಪ್ರಸನ್ನಕುಮಾರ್ ನೋಂದಣಿಯಾಗಿದೆ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರು ಆರ್.ವಿ. ಪ್ರಸನ್ನ ಕುಮಾರ್ , ನಿಪಿ-23 ರಲ್ಲಿರುವ ಪ್ರಸನ್ನಕುಮಾರ್ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಒಂದು ವಾಹನ ನೋಂದಣಿ ಮಾಡಿಸಬೇಕು ಎಂದರೆ ಆಧಾರ್ ಕಾರ್ಡ್ ಮತ್ತು ಐ.ಡಿ. ಕಾರ್ಡ್ ಕೊಡಬೇಕು ಎಂದರೆ ಸರಿ. ಸದರಿ ಆಧಾರ್ ಕಾರ್ಡ್ ಮತ್ತು ಐ.ಡಿ. ಕಾರ್ಡ್ ನಲ್ಲಿ ಹನುಮಂತಪ್ಪ ಬಿನ್ ಪ್ರಸನ್ನಕುಮಾರ್ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರು ಆರ್.ವಿ. ಪ್ರಸನ್ನ ಕುಮಾರ್ , ಪ್ರಸನ್ನಕುಮಾರ್ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮುಂದುವರೆದು ಸಾಕ್ಷಿಯು ಆಧಾರ್ ಕಾರ್ಡ್ ಮತ್ತು ಐ.ಡಿ. ಕಾರ್ಡ್ ನ್ನು ಸೃಷ್ಟಿಸಿರುತ್ತಾರೆ ಎಂದು ನುಡಿಯುತ್ತಾರೆ.

6. ನಿಪಿ-24 ಪಾಸ್ ಪೋರ್ಟ್ ನಲ್ಲಿಯೂ ಹನುಮಂತಪ್ಪ ಬಿನ್ ಪ್ರಸನ್ನಕುಮಾರ್ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರು ಆರ್.ವಿ. ಪ್ರಸನ್ನ ಕುಮಾರ್ , ನಿಪಿ-24 ರಲ್ಲಿರುವ ಪ್ರಸನ್ನಕುಮಾರ್ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸದರಿ ದಾಖಲೆ ಸೃಷ್ಟಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾವೆ ಹೂಡಿದ ನಂತರ ಪ್ರಸನ್ನಕುಮಾರ್ ಯಾರು ಎಂದು ತಿಳಿದುಕೊಳ್ಳಲು ಪ್ರಯತ್ನಿಸಿರುವುದಿಲ್ಲ. ಓ.ಎಸ್ 253/2017 ರಲ್ಲಿ ವಾದಿಯವರು ಅವಶ್ಯಕ ಪಕ್ಷಗಾರರು ಎಂದು ಸದರಿ ದಾವೆಯಲ್ಲಿ ಸೇರಿಕೊಂಡಿರುವುದನ್ನು ನಾನು ಪ್ರಶ್ನಿಸಿರುವುದಿಲ್ಲ. ಸದರಿ ದಾವೆಯಲ್ಲಿ ವಾದಿಯವರು ಕಟ್ಟಡದ ಬಾಡಿಗೆಯನ್ನು ನ್ಯಾಯಾಲಯದಲ್ಲಿ ಠೇವಣಿ ಮಾಡಿ ಎಂದು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸದರಿ ಅರ್ಜಿ ನಾನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಯವರು ತಕರಾರು ಸಲ್ಲಿಸಿದ ನಂತರವೇ ನ್ಯಾಯಾಲಯದಲ್ಲಿ ಬಾಡಿಗೆ ಠೇವಣಿಯಾಗುತ್ತಿದೆ ಎಂದರೆ ಸರಿಯಲ್ಲ.

7. ವಾದಿಗಳು ಹಾಜರುಪಡಿಸಿದ ದಾಖಲೆಗಳನ್ನು ನಾನು ಪಡೆದಿರುತ್ತೇನೆ. ನಿಪಿ-3 ರಿಂದ ನಿಪಿ-24 ರವರೆಗಿನ ದಾಖಲೆಗಳಲ್ಲಿ ಪ್ರಸನ್ನಕುಮಾರ್ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ಸದರಿ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ನಾನು ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಕೇಳಲು ಹೋದಾಗ ಪ್ರಸನ್ನಕುಮಾರ್ ಯಾರೋ ಗೊತ್ತಿಲ್ಲ , ನೀನು ಯಾಕೆ ತಲೆಕೆಡಿಸಿಕೊಳ್ಳುತ್ತೀಯಾ ಎಂದು ನನಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳಲ್ಲಿ ಪ್ರಸನ್ನಕುಮಾರ್ ಎಂದು ನಮೂದಾಗಿರುವ ಬಗ್ಗೆ ಕೇಳಿದ್ದೀರಾ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರು ಆರ್.ವಿ. ಪ್ರಸನ್ನಕುಮಾರ್ ಆದ ಕಾರಣ ನಾನು ಅಷ್ಟಾಗಿ ತಲೆಕೆಡಿಸಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ.

8. 1 ಮತ್ತು 3 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯಲು ನನಗೆ ತೊಂದರೆ ಇಲ್ಲ ಎಂದರೆ ಸಾಕ್ಷಿಯು ಅವರ ಪರವಾಗಿ ನಾನು ಸಾಕ್ಷ್ಯ ನುಡಿಯುತ್ತಿರುವ ಕಾರಣ ಅದರ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರಕ್ಕೆ ಯಾರು ಮಾಹಿತಿ ನೀಡಿರುತ್ತೀರಿ ಎಂದರೆ ಸಾಕ್ಷಿಯು ನಾವು ಮೂರು ಜನ ಸೇರಿ ಮಾಹಿತಿ ನೀಡಿರುತ್ತೇವೆ ಎಂದು ನುಡಿಯುತ್ತಾರೆ.

9. 4 ನೇ ಪ್ರತಿವಾದಿಯ ಪರವಾಗಿ ನಾವು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಮಾಹಿತಿಯನ್ನು ನಾವು ಮೂರು ಜನ

ಪ್ರತಿವಾದಿಗಳು ಸೇರಿ ವಕೀಲರಿಗೆ ಮಾಹಿತಿ ನೀಡಿರುತ್ತೇವೆ. ವಾದಿಗಳಿಗೆ ಭಾಗಾಂಶ ಕೊಡುವುದನ್ನು ತಪ್ಪಿಸಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆ ಹೂಡಿದ 6 ತಿಂಗಳ ನಂತರ ನಮ್ಮ ವಂಶದವರು ಸೇರಿ ಶಿರಾ ನಗರದ ಶಂಕರ್ ನರ್ಸಿಂಗ್ ಹೋಮ್ ಬಳಿ ಇರುವ ನಿವೇಶನವನ್ನು ವಾದಿಯವರಿಗೆ ಕೊಡಬೇಕು ಎಂದು ಪಂಚಾಯ್ತಿ ಮಾಡಿರುತ್ತಾರೆ ಎಂದರೆ ಸುಳ್ಳು. ಸದರಿ ಎಲ್ಲಾ ವಿಚಾರ ಗೊತ್ತಿದ್ದರೂ ವಾದಿಯವರ ಭಾಗಾಂಶವನ್ನು ತಪ್ಪಿಸಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.